ದೂರವಾಣಿ ಸಂಖ್ಯೆ : 2419209/2419361
ಫ್ಯಾಕ್ಸ್ 0821-2419363/2419301

e-mail registrar@uni-mysore.ac.in
www.uni-mysore.ac.in

# ಮೈಸೂರು ವಿಶ್ವವಿದ್ಯಾನಿಲಯ

ಸ್ಥಾಪನೆ: 1916

ವಿಶ್ವವಿದ್ಯಾನಿಲಯ ಕಾರ್ಯಸೌಧ
ಕ್ರಾಫರ್ಡ್ ಭವನ, ಮೈಸೂರು

ಪತ್ರ ಸಂಖ್ಯೆ:ಜಿಎಲ್4(8)/39/2017-18 **ಜ್ಞಾಪನಾ ಪತ್ರ** ದಿನಾಂಕ: 10-09-2024.

ವಿಷಯ: 2023-24ನೇ ಸಾಲಿನ ವಾರ್ಷಿಕ ದಾಸ್ತಾನು ಪರಿಶೀಲನಾ ವರದಿಯನ್ನು ಮತ್ತು ಗಳಿಕೆ ರಜೆ ಮಂಜೂರಾತಿಗೆ ಮನವಿಯನ್ನು ಸಲ್ಲಿಸುವ ಬಗ್ಗೆ.

ಉಲ್ಲೇಖ:1. ವಿಶ್ವವಿದ್ಯಾನಿಲಯದ ಸುತ್ತೋಲೆ ಸಂಖ್ಯೆ: ಜಿಎಲ್4(8)/39/2017-18 ದಿನಾಂಕ:29-05-2024.

2. ವಿಶ್ವವಿದ್ಯಾನಿಲಯದ ಸುತ್ತೋಲೆ ಸಂಖ್ಯೆ: ಜಿಎಲ್4(8)/39/2017-18 ದಿನಾಂಕ:25-06-2024.

******

ಮೈಸೂರು ವಿಶ್ವವಿದ್ಯಾನಿಲಯದ ಎಲ್ಲಾ ಅಧ್ಯಯನ ವಿಭಾಗಗಳ/ ಅಧ್ಯಕ್ಷರುಗಳು/ ಕೇಂದ್ರಗಳ ನಿರ್ದೇಶಕರುಗಳು/ ಸಂಯೋಜಕರುಗಳು/ ಬಟವಾಡೆ ಅಧಿಕಾರಿಗಳು/ಮುಖ್ಯಸ್ಥರು/ವಿಶ್ವವಿದ್ಯಾನಿಲಯ ತಾಂತ್ರಿಕ ಕಾಲೇಜಿನ ನಿರ್ದೇಶಕರು/ ಘಟಕ ಕಾಲೇಜಿನ ಪ್ರಾಂಶುಪಾಲರುಗಳು ಇವರಿಗೆ ತಿಳಿಯಪಡಿಸುವುದೇನೆಂದರೆ ಈಗಾಗಲೆ ಉಲ್ಲೇಖಿತ(1) ಮತ್ತು (2) ರ ವಿಶ್ವವಿದ್ಯಾನಿಲಯದ ಸುತ್ತೋಲೆಯನ್ವಯ 2023-24ನೇ ಸಾಲಿನ ವಾರ್ಷಿಕ ದಾಸ್ತಾನು ಪರಿಶೀಲನಾ ವರದಿಯನ್ನು ಮೈಸೂರು ವಿಶ್ವವಿದ್ಯಾನಿಲಯದ 2023-24ನೇ ಸಾಲಿನ ಶೈಕ್ಷಣಿಕ ವೇಳಾ ಪಟ್ಟಿಯನುಸಾರ ಟರ್ಮಿನಲ್ ರಜೆ ಅವಧಿಯಲ್ಲಿ ನಿರ್ವಹಿಸಿ, **ದಿನಾಂಕ:31.08.2024ರೊಳಗಾಗಿ** ಅಥವಾ ಅದಕ್ಕಿಂತ ಮುಂಚಿತವಾಗಿ ಹಣಕಾಸು ಅಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು ಇವರ ಕಛೇರಿಗೆ ನೇರವಾಗಿ ಕಳುಹಿಸುವಂತೆ ಹಾಗೂ ಇದರ ಪ್ರತಿಯೊಂದನ್ನು ಕುಲಸಚಿವರ ಕಛೇರಿಗೆ ಹಾಗೂ ದಾಸ್ತಾನು ಪರಿಶೀಲನಾ ಕಾರ್ಯನಿರ್ವಹಿಸಿದ **ಅಧ್ಯಾಪಕರುಗಳ ಗಳಿಕೆ ರಜೆ ಮಂಜೂರಾತಿಗಾಗಿ ಪ್ರತ್ಯೇಕವಾಗಿ ಮನವಿ ಪತ್ರವನ್ನು ಮಾನ್ಯ ಕುಲಸಚಿವರ ಕಛೇರಿಗೆ ನೇರವಾಗಿ ಕಳುಹಿಸುವಂತೆ** ಈಗಾಗಲೆ ತಿಳಿಸಲಾಗಿತ್ತು.

ಆದರೂ ಸಹ ಇನ್ನು ಕೆಲವು ವಿಭಾಗಗಳಿಂದ ನಿಗಧಿತ ಅವಧಿ ಮುಗಿದಿದ್ದರೂ ಕೂಡ ವಾರ್ಷಿಕ ದಾಸ್ತಾನು ವರದಿಯನ್ನು ಹಾಗೂ ಈ ಕಾರ್ಯವನ್ನು ನಿರ್ವಹಿಸಿರುವ ಅಧ್ಯಾಪಕರುಗಳಿಗೆ ಗಳಿಕೆ ರಜೆ ಮಂಜೂರಾತಿಗಾಗಿ ಮನವಿ ಪತ್ರವನ್ನು ಸಲ್ಲಿಸದಿರುವುದು ಕಂಡು ಬಂದಿರುತ್ತದೆ. ಆದ್ದರಿಂದ ವಾರ್ಷಿಕ ದಾಸ್ತಾನು ವರದಿಯನ್ನು ಹಾಗೂ ಅಧ್ಯಾಪಕರುಗಳಿಗೆ ಗಳಿಕೆ ರಜೆ ಮಂಜೂರಾತಿಗಾಗಿ ಮನವಿ ಪತ್ರವನ್ನು ಸಲ್ಲಿಸದಿರುವ ವಿಭಾಗಗಳ ಮುಖ್ಯಸ್ಥರುಗಳು / ಕಾಲೇಜಿನ ಪ್ರಾಂಶುಪಾಲರುಗಳು ಜ್ಞಾಪನಾ ಪತ್ರ ತಲುಪಿದ **07 ದಿನದೊಳಗೆ ಸಲ್ಲಿಸುವಂತೆ** ಮತ್ತೊಮ್ಮೆ ತಿಳಿಸಲಾಗಿದೆ.

ಕುಲಸಚಿವ
ಮೈಸೂರು ವಿಶ್ವವಿದ್ಯಾನಿಲಯ
ಮೈಸೂರು

ಇವರಿಗೆ:

1. ಮೈಸೂರು ವಿಶ್ವವಿದ್ಯಾನಿಲಯದ ಎಲ್ಲಾ ಸ್ನಾತಕೋತ್ತರ ಅಧ್ಯಯನ ವಿಭಾಗಗಳ ಮುಖ್ಯಸ್ಥರು /ಬಟವಾಡೆ ಅಧಿಕಾರಿಗಳು/ ಅಧೀನಕ್ಕೊಳಪಟ್ಟ ಕಾಲೇಜುಗಳ ಪ್ರಾಂಶುಪಾಲರುಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
2. ನಿರ್ದೇಶಕರು, ವಿಶ್ವವಿದ್ಯಾನಿಲಯ ತಾಂತ್ರಿಕ ಕಾಲೇಜು, ಮಾನಸಗಂಗೋತ್ರಿ, ಮೈಸೂರು.
3. ಹಣಕಾಸು ಅಧಿಕಾರಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
4. ಕುಲಸಚಿವ(ಪರಿಕ್ಷಾಂಗ), ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
5. ಎಸ್ಟೇಟ್ ಅಧಿಕಾರಿಗಳು, ಆಡಳಿತ ಶಾಖೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
6. ಕಾರ್ಯಪಾಲಕ ಅಭಿಯಂತರರು, ವಿಶ್ವವಿದ್ಯಾನಿಲಯ ತಾಂತ್ರಿಕ ವಿಭಾಗ, ಮಾನಸಗಂಗೋತ್ರಿ, ಮೈಸೂರು.
7. ನಿರ್ದೇಶಕರು, ಐ.ಸಿ.ಡಿ., ಗಣಕ ವಿಜ್ಞಾನ ಅಧ್ಯಯನ ವಿಭಾಗ, ಮಾನಸಗಂಗೋತ್ರಿ, ಮೈಸೂರು-ಸದರಿ ಜ್ಞಾಪನಾ ಪತ್ರವನ್ನು ವಿಶ್ವವಿದ್ಯಾನಿಲಯದ ಜಾಲತಾಣದಲ್ಲಿ ಪ್ರಕಟಿಸಲು ಕ್ರಮವಹಿಸುವುದು.

ಪ್ರತಿ:

1. ಉಪ ಕುಲಸಚಿವರು/ಸಹಾಯಕ ಕುಲಸಚಿವರು/ಅಧೀಕ್ಷಕರು, ಆಡಳಿತ ಶಾಖೆ, ಹಣಕಾಸು ಶಾಖೆ, ಪರೀಕ್ಷಾ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
2. ಮಾನ್ಯ ಕುಲಪತಿ/ಕುಲಸಚಿವ/ಕುಲಸಚಿವ(ಪರೀಕ್ಷಾಂಗ)/ ಹಣಕಾಸು ಅಧಿಕಾರಿಗಳ ಆಪ್ತ ಸಹಾಯಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
3. ಅಪರ ನಿರ್ದೇಶಕರು, ಕರ್ನಾಟಕ ರಾಜ್ಯ ಲೆಕ್ಕಪರಿಶೋಧನೆ ಮತ್ತು ಲೆಕ್ಕಪತ್ರ ಇಲಾಖೆ ಪ್ರಾಂತೀಯ ಕಛೇರಿ, ಮೈಸೂರು ವಿಭಾಗ, ಕ್ರಾಫರ್ಡ್ ಹಾಲ್ ಹಿಂಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
4. ಕಾರ್ಯನಿರ್ವಾಹಕರು ಜಿಎಲ್6, ಆಡಳಿತ ಶಾಖೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು- ಮುಂದಿನ ಸೂಕ್ತ ಕ್ರಮಕ್ಕಾಗಿ.
5. ಕಾರ್ಯನಿರ್ವಾಹಕರು ಹ.ಶಾ-24 ಹಣಕಾಸು ಶಾಖೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು-ಮುಂದಿನ ಸೂಕ್ತ ಕ್ರಮಕ್ಕಾಗಿ.
6. ಕಛೇರಿ ಪ್ರತಿ.

Scanned with OKEN Scanner